ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ನಮ್ಮ Town and Country Planning Act ನಲ್ಲಿ O.D.P., C.D.P. ಎಂದು ಇತ್ತು. ಅದೆರಡನ್ನೂ ಕೂಡ merge ಮಾಡಿ ಒಂದು Master Plan ಎಂದು ಮಾಡಿದ್ದೇವೆ. ಏಕೆಂದರೆ ಅನೇಕ ಈ heritage building ಗಳನ್ನು ಮತ್ತೆ ಬೇರೆ ಇರುವಂಥ ಅನೇಕ building ಗಳನ್ನು ಕಾಪಾಡಬೇಕೆನ್ನುವ ದೃಷ್ಟಿಯಿಂದ Planning authority ಗೆ jurisdiction ಅನ್ನು ಕೊಡಬೇಕೆನ್ನುವಂಥದ್ದನ್ನೆಲ್ಲಾ ಸೇರಿಸಿ, ಜೊತೆಗೆ 74th Amendment ನಲ್ಲಿ ಈ delegation of powers to the planning authority ಅನೇಕ licence ಮತ್ತೊಂದು ಕೊಡಲಿಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಅವಕಾಶವನ್ನು ಮಾಡಿಕೊಡಬೇಕು ಎನ್ನುವುದನ್ನೂ ಕೂಡ ನಾವು ಇಲ್ಲಿ ತಂದಿದ್ದೇವೆ, ಮತ್ತು change of land use ಕೂಡ ಮಾಡಲಿಕ್ಕೆ ಸಧ್ಯದಲ್ಲಿಯೇ ಅವರಿಗೂ ಕೂಡ ಏನು ಅತಂಕ ಆಗುತ್ತಿತ್ತು ಏನು ತೊಂದರೆ ಆಗುತ್ತಿತ್ತು ಅದನ್ನೂ ಕೂಡ ಟೈಮ್‌ನ್ನು ಲಿಮಿಟ್ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲೂ ಕೂಡ ಹಣವನ್ನು ಕಟ್ಟಿ ನೇರವಾಗಿ ಮಾಡಲಿಕ್ಕೆ ಇಲ್ಲಿ ಒಂದು ಅವಕಾಶವನ್ನು ತಂದಿದ್ದೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 14ರವರೆಗೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:- "ಖಂಡ 2 ರಿಂದ 24ರವರೆಗೆ, ಎರಡೂ ಸೇರಿಸಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 24ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮುಖಬೆಗೆ ಒಪ್ಪಿಗೆ ನೀಡಲಾಯಿತು

(v) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2004

(ಮುಂದುವರಿದ ಚರ್ಚೆ)

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು): ಅಧ್ಯಕ್ಷರೆ, ಎಕನಾಮಿಕ್ ವಯಬಿಲಿಟಿಯಲ್ಲಿ ಅದು ಇರಬೇಕಾಗುತ್ತದೆ. ಏಕೆಂದರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಪ್ರೆಸಿಡೆಂಟ್ ಆಫ್ ಇಂಡಿಯಾ ಇವರ ಡೈರೆಕ್ಷನ್ಸ್ ಮೇಲೆ ತೆಗೆದುಕೊಂಡಿರುವ ತೀರ್ಮಾನಗಳವು. ಎಷ್ಟಿರಬೇಕೆಂಬ ಬಗ್ಗೆ ಎಸ್.ಎಸ್. ಪಾಟೀಲರು, ಹೆಚ್ಚು ಮಾಡಿದ್ದೀರಿ, ಕಡಿಮೆ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಈಗೇನು ನಾವು ಸರ್ಕ್ಯುಲರ್ ಕಳುಹಿಸಿದ್ದೇವೆ, ಆ ಸರ್ಕ್ಯುಲರ್ ಸ್ಟ್ರಾಷ್ ಆಗಿದೆ. ನಾವು ರೂಲ್ಸ್‌ನಲ್ಲಿ ನಾಮಿನಲ್ ಆಗಿ ಹಾಕಿಕೊಳ್ಳಲಿಕ್ಕೆ....

ಶ್ರೀ ಶಿವಾನಂದ ಎಸ್ ಪಾಟೀಲ್: ಸೌಹಾರ್ದ ಆಕ್ಟ್‌ಗೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ. ನಮ್ಮ ಬರಿಜಿನಲ್ ಕೋ-ಆಪರೇಟಿವ್ ಆಕ್ಟ್‌ನಲ್ಲಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ರಿಜಿಸ್ಟ್ರೇಷನ್ ಆಗುತ್ತಿವೆ. ಈಗಾಗಲೇ ಮೂರೂವರೆ ಸಾವಿರ ಸೊಸೈಟಿಗಳು ರಿಜಿಸ್ಟ್ರೇಷನ್ ಆಗಿವೆ. ಅವರ ಹಣಕಾಸಿನ ವ್ಯವಹಾರವೂ ಇದೇ ಇದೆ. ಅವರ ಬಗ್ಗೆ ಏನಾದರೂ ವಿಚಾರ ಮಾಡಿದ್ದೀರಾ? ಏಕೆಂದರೆ, ಯಾವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ರಿಜಿಸ್ಟ್ರೇಷನ್ ಆಗಿವೆ, ಅಲ್ಲೆಲ್ಲಾ ಡಿ.ಸಿ.ಸಿ. ಬ್ಯಾಂಕ್, ಅರ್ಬನ್ ಬ್ಯಾಂಕ್ ಮಲಗಿವೆ. ರೀಸನ್ ಈಜ್, ಸಿ.ಆರ್.ಆರ್ : ಎಸ್‌ಎಲ್‌ಆರ್ ಮೇನಟೇನ್ ಮಾಡಲು ತಮ್ಮಲ್ಲಿ ಯಾವುದೇ ರೂಲ್ಸ್ ಇಲ್ಲ ಮತ್ತು ಅವರದ್ದು ಆಕ್ಟಿಂಗ್ ಬಿಯಾಂಡ್ ಆರ್‌ಬಿಐ